Date : 25-9-2015

# ಅಸಮರ್ಪಕ ಮಳೆಯಿಂದ ಜೋಳದ ಬೆಳೆಯ ಮೇಲೆ ಪರಿಣಾಮ

ಅಸಮರ್ಪಕ ಮುಂಗಾರು ಮಳೆಯ ಪರಿಣಾಮದಿಂದ ಭಾರತದ ಈ ವರ್ಷದ ಜೋಳ ಉತ್ಪಾದನೆ 20 ಮಿಲಿಯನ್ ಟನ್‌ಗಳೆಂದು ನಿರೀಕ್ಷಿಸಿದ್ದು ಹಿಂದಿನ 5 ವರ್ಷಗಳಲ್ಲೇ ಇದು ಅತಿ ಕಡಿಮೆಯಾಗಿದೆ. ಬಿತ್ತನೆ ಪ್ರಮಾಣ ಹೆಚ್ಚಳವಿದ್ದು, ಕಾಲಕ್ಕೆ ಸರಿಯಾಗಿ ಮಳೆಯಾಗದೆ ಉತ್ಪಾದನೆ ಕುಂಠಿತವಾಗುವ ನಿರೀಕ್ಷೆಯಿದೆ. ತಮಿಳು ನಾಡು, ಆಂಧ್ರಪ್ರದೇಶ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳಲ್ಲಿನ ಜೋಳ ಬಿತ್ತನೆ ಈ ವರ್ಷ ಸಪ್ಟೆಂಬರ್ 11 ರ ತನಕ 7.59 ಮಿಲಿಯನ್ ಹೆಕ್ಟೇರ್‌ಗಳಾಗಿದ್ದು, ಹಿಂದಿನ ವರ್ಷ 7.46 ಮಿಲಿಯನ್ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆಯಾಗಿತ್ತೆಂದು ಕೃಷಿ ಮತ್ತು ಕೋಪರೇಶನ್ ಸಂಸ್ಥೆಯ ದಾಖಲೆಯಾಗಿದೆ. 4ನೇ ಮುಂಚಿತ ಉತ್ಪಾದನಾ ಅಂದಾಜಿನ ಪ್ರಕಾರ ಹಿಂದಿನ ಸೀಜನ್‌ನ ಜೋಳ ಉತ್ಪಾದನೆ 23.67 ಎಂ ಟನ್‌ಗಳಾಗ ಬಹುದೆನ್ನಲಾಗಿದೆ. ಈ ಸಲದ ಉತ್ಪಾದನೆ ಕಡಿಮೆಯಾಗುವ ನೀರಿಕ್ಷೆಯಿಂದ ಈ ವರ್ಷದ ಜೋಳದ ಬೆಲೆ ಉತ್ತಮವಾಗಿರುವ ನಿರೀಕ್ಷೆ ಇದೆ. ಈ ವರ್ಷದ ಜೋಳದ ಇಳುವರಿ ಮತ್ತು ಗುಣಮಟ್ಟ ಅಸಮರ್ಪಕ ಮಳೆಯಿಂದ ಬಾಧಿತವಾಗುವ ಸಂಭವವಿದೆ.  ಹಿಂದಿನೆರಡು ವರ್ಷಗಳಿಂದ ಜಾಗತಿಕ ಜೋಳದ ದರ ಕಡಿಮೆಯಾಗಿದೆ. ವರ್ಷದ ಕೊನೆಯ ಹೆಚ್ಚುವರಿ ದಾಸ್ತಾನು ಇದಕ್ಕೆ ಕಾರಣವೆನ್ನಲಾಗಿದ್ದು ಯು.ಎಸ್‌ನಲ್ಲಿ ಹಿಂದಿನ 28 ವರ್ಷಗಳಲ್ಲೇ ಅತಿ ಹೆಚ್ಚು ಜೋಳದ ಮೀಸಲು ದಾಸ್ತಾನಿದ್ದು, ವರ್ಷದ ಅಂತ್ಯದಲ್ಲಿ ಹೆಚ್ಚಿನ ದಾಸ್ತಾನು ನಿರೀಕ್ಷಿತವಾಗಿದೆ. ಇದರಿಂದ ಭಾರತದಲ್ಲಿ ಜೋಳದ ದರ ಅಂತರಾಷ್ಟ್ರೀಯ ದರಕ್ಕಿಂತ ಅಧಿಕವಿದ್ದು ಈ ವರ್ಷ ರಫ್ತು ಲಾಭದಾಯವಾಗಿಲ್ಲವೆನ್ನಲಾಗಿದೆ. ರಫ್ತು ಕಡಿಮೆಯಾಗುವ ಸಂಭವವಿರುವುದರಿಂದ ಆಂತರಿಕ ಮಾರುಕಟ್ಟೆಯಲ್ಲಿ ಜೋಳ ಸಾಕಷ್ಟು ಲಭ್ಯವಾಗುವ ನಿರೀಕ್ಷೆಯಿದೆಯೆನ್ನಲಾಗಿದೆ.